## ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 359 |
| ಸದಸ್ಯರ ಹೆಸರು | ಶ್ರೀ ಕೆ.ಗೋವಿಂದರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 12-12-2018 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಮತ್ತು ಮುಜರಾಯಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆ ಮತ್ತು ಜಲ್ಲಿ ಕ್ರಷರ್‌ಗಳಿಗೆ ಕಡಿವಾಣ ಬೀಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 164 ಕಟ್ಟಡ ಕಲ್ಲು ಗಣಿ ಗುತ್ತಿಗೆಗಳು ಮತ್ತು 150 ಜೆಲ್ಲಿ ಕ್ರಷರ್‌ಗಳು ಚಾಲ್ತಿಯಲ್ಲಿರುತ್ತವೆ.<br>ಆನೇಕಲ್ ತಾಲ್ಲೂಕು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸೂಕ್ಷ್ಮ ವಲಯದ 10 ಕಿ.ಮೀ ವ್ಯಾಪ್ತಿಯೊಳಗಡೆ ಬರುವ ಕಲ್ಲು ಗಣಿ ಗುತ್ತಿಗೆಗಳನ್ನು ಮತ್ತು ಜೆಲ್ಲಿ ಕ್ರಷರ್‌ಗಳನ್ನು ಸ್ಥಗಿತಗೊಳಿಸಲು ಕೋರಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬನ್ನೇರುಘಟ್ಟ ರಾಷ್ಟೀಯ ಉದ್ಯಾನವನರವರು ದಿನಾಂಕ:07.05.2018ರಂದು ಪತ್ರವನ್ನು ಬರೆದಿರುತ್ತಾರೆ.<br>ಈ ಹಿನ್ನೆಲೆಯಲ್ಲಿ ಇಲಾಖೆಯಿಂದ ಸದರಿ ಪ್ರದೇಶದಲ್ಲಿನ ಕಲ್ಲುಗಣಿಗುತ್ತಿಗೆ ಪ್ರದೇಶಗಳನ್ನು ತಪಾಸಣೆ ನಡೆಸಲಾಗಿರುತ್ತದೆ. ಸದರಿ ಸ್ಥಳ ಪರಿಶೀಲನೆಯಂತೆ ಕಲ್ಲುಗಣಿಗುತ್ತಿಗೆದಾರರು ಕಲ್ಲುಗಣಿಗುತ್ತಿಗೆ ಪ್ರದೇಶದಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗನುಸಾರ ಕಾರ್ಯ ನಿರ್ವಹಿಸದಿರುವುದು ಕಂಡುಬಂದಿರುತ್ತದೆ. ಅದರನ್ವಯ ಆನೇಕಲ್ ತಾಲ್ಲೂಕು, ಬನ್ನೇರುಘಟ್ಟ ರಾಷ್ಟೀಯ ಉದ್ಯಾನವನದಿಂದ 1 ಕಿ.ಮೀ ಸುರಕ್ಷತಾ ವಲಯದಿಂದ ಹೊರಗೆ ಇರುವ 27 ಕಟ್ಟಡ ಕಲ್ಲುಗಣಿ ಗುತ್ತಿಗೆಗಳನ್ನು ಮತ್ತು 24 ಜೆಲ್ಲಿ ಕ್ರಷರ್‌ಗಳನ್ನು ಸ್ಥಗಿತಗೊಳಿಸಲು ಸೂಚಿಸಿ ಈ ಕಛೇರಿಯಿಂದ ಎಲ್ಲಾ ಗುತ್ತಿಗೆದಾರರಿಗೆ ಮತ್ತು ಜೆಲ್ಲಿ ಕ್ರಷರ್ ಮಾಲೀಕರಿಗೆ ನೋಟಿಸ್‌ಗಳನ್ನು ಜಾರಿಮಾಡಲಾಗಿರುತ್ತದೆ.<br>ಕಲ್ಲು ಗಣಿ ಗುತ್ತಿಗೆ ಮತ್ತು ಜೆಲ್ಲಿ ಕ್ರಷರ್‌ಗಳನ್ನು ಸ್ಥಗಿತಗೊಳಿಸುವಂತೆ ನೀಡಿರುವ ನೋಟೀಸ್ ವಿರುದ್ಧ ಗುತ್ತಿಗೆದಾರರುಗಳು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 21987/2018, 21985/2018, 19818/2018, 27903/2018, 25912/2018 ಮತ್ತು 25914/2108 ಗಳನ್ನು ದಾಖಲಿಸಿರುತ್ತಾರೆ. ಈ ಎಲ್ಲಾ ಪ್ರಕರಣಗಳಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ಫಿರ್ಯಾದುದಾರರಿಗೆ ನಿಯಮಗಳ ಅನುಸಾರ ಹೇಳಿಕೆ ನೀಡಲು ಅವಕಾಶವನ್ನು ನೀಡಿ, ಸದರಿ ಫಿರ್ಯಾದುದಾರರಿಂದ ಹೇಳಿಕೆಯನ್ನು ಪಡೆದು ನಂತರ ಕ್ರಮ ಜರುಗಿಸಲು ಸಕ್ಷಮ ಅಧಿಕಾರಿರವರಿಗೆ ಸೂಚಿಸಿರುತ್ತದೆ.<br>ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ, ಕಲ್ಲು ಗಣಿಗಾರಿಕೆಯಲ್ಲಿ ನಿಯಮಗಳನ್ನು ಪಾಲನೆ ಮಾಡಿರುವ ಕುರಿತು ಎಲ್ಲಾ ದಾಖಲಾತಿಗಳನ್ನು ಸಲ್ಲಿಸಲು ಮತ್ತು ಸಕ್ಷಮ ಅಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಲು |

| | | |
|---|---|---|
| | | ಕಲ್ಲುಗಣಿಗುತ್ತಿಗೆದಾರರಿಗೆ ಅವಕಾಶವನ್ನು ನೀಡಲಾಗಿರುತ್ತದೆ.<br>ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲ್ಲು ಗಣಿಗುತ್ತಿಗೆದಾರರು, ಕಲ್ಲುಗಣಿಗುತ್ತಿಗೆ ಪ್ರದೇಶಗಳಲ್ಲಿ ನಿಯಮಗಳನ್ನು ಪಾಲನೆ ಮಾಡಿರುವ ಬಗ್ಗೆ ಸೂಕ್ತ ದಾಖಲೆಗಳನ್ನು ಸಲ್ಲಿಸದ ಹಿನ್ನಲೆಯಲ್ಲಿ ಗುತ್ತಿಗೆದಾರರು ಗಣಿಗಾರಿಕೆಯನ್ನು ಪುನರ್ ಪ್ರಾರಂಭಿಸಲು ಕೋರಿರುವ ಮನವಿಯನ್ನು ತಿರಸ್ಕರಿಸಲಾಗಿರುತ್ತದೆ.<br>ಈ ಕುರಿತು ಘನ ಉಚ್ಛ ನ್ಯಾಯಾಲಯದಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿರುತ್ತದೆ. ಹಾಗಾಗಿ ಈ ಎಲ್ಲಾ ಪ್ರಕರಣಗಳು ಘನ ಉಚ್ಛ ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿದ್ದು, ಉಚ್ಛನ್ಯಾಯಾಲಯದ ಅಂತಿಮ ಆದೇಶಂತೆ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.<br>ಪ್ರಸ್ತುತ ಆನೇಕಲ್ ತಾಲ್ಲೂಕಿನಲ್ಲಿ ಎಲ್ಲಾ ಕಟ್ಟಡದ ಕಲ್ಲುಗಣಿ ಗುತ್ತಿಗೆಗಳು ಜೆಲ್ಲಿ ಕ್ರಷರ್‌ಗಳು ಸ್ಥಗಿತಗೊಂಡಿದ್ದು, ಯಾವುದೇ ಅಕ್ರಮ ಗಣಿಗಾರಿಕೆ ಅಥವಾ ಜೆಲ್ಲಿ ಕ್ರಷರ್ ನಡೆಯದಂತೆ ಇಲಾಖೆಯಿಂದ ಗೃಹ ರಕ್ಷಕದಳದ ಸಿಬ್ಬಂದಿಯನ್ನು ನಿಯೋಜಿಸಿದ್ದು, ಭೂವಿಜ್ಞಾನಿಯವರು ಸಹ ಹಗಲು ರಾತ್ರಿ ಗಸ್ತು ತಿರುಗಿ ಯಾವುದೇ ಗಣಿಗಾರಿಕೆ ನಡೆಯದಂತೆ ನಿಗಾವಹಿಸಿ ಕ್ರಮ ಕೈಗೊಳ್ಳಲಾಗಿದೆ.<br>ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸೂಕ್ಷ್ಮವಲಯದ 10 ಕಿ.ಮೀ ವ್ಯಾಪ್ತಿಯೊಳಗೆ ಬರುವ ಕಲ್ಲುಗಣಿ ಗುತ್ತಿಗೆಗಳ ಗಣಿಗಾರಿಕೆ ಸಂಬಂಧ ದಿನ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಕುರಿತು ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರು ಸ್ವಯಂ ಪ್ರೇರಣೆಯ ಪ್ರಕರಣವನ್ನು ದಾಖಲಿಸಿಕೊಂಡಿದ್ದು ಈ ಕುರಿತು ವಿಚಾರಣೆ ನಡೆಸಿ ಅಂತಿಮವಾಗಿ ದಿನಾಂಕ:17.12.2018ರಂದು ಜಂಟಿಯಾಗಿ ಸರ್ವೆ ಮಾಡಿ ವರದಿಯನ್ನು ನೀಡಲು ಆದೇಶಿಸಲಾಗಿರುತ್ತದೆ.<br>ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿಯ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಕಲ್ಲು ಗಣಿ ಗುತ್ತಿಗೆಗಳನ್ನು ಮತ್ತು ಜೆಲ್ಲಿ ಕ್ರಷರ್‌ಗಳನ್ನು ಇಲಾಖೆಯ ಅಧಿಕಾರಿಗಳು ದಿನಾಂಕ:06.08.2018 ಮತ್ತು 11.08.2018ರಂದು ತಪಾಸಣೆ ನಡೆಸಿ ಖನಿಜ ರವಾನೆ ಪರವಾನಿಗೆ ಪಡೆಯದೆ ತೆಗೆದಿರುವ ಉಪಖನಿಜ ಹಾಗೂ ಜೆಲ್ಲಿ ಕ್ರಷರ್‌ಗಳಲ್ಲಿ ದಾಸ್ತಾನು ಮಾಡಿದ್ದ, ಉಪಖನಿಜದ ಪ್ರಮಾಣಕ್ಕೆ ರಾಜಧನ ಪಾವತಿಸುವವರೆಗೂ ಎಲ್ಲಾ ಕಲ್ಲು ಗಣಿ ಗುತ್ತಿಗೆಗಳನ್ನು ಮತ್ತು ಜೆಲ್ಲಿ ಕ್ರಷರ್‌ಗಳನ್ನು ಸ್ಥಗಿತಗೊಳಿಸಲಾಗಿರುತ್ತದೆ.<br>ನಂತರ ಸದರಿ ಕಲ್ಲುಗಣಿ ಗುತ್ತಿಗೆದಾರರು ಕಲ್ಲುಗಣಿಗುತ್ತಿಗೆ ಮೇಲಿನ ಬಾಕಿ ರಾಜಧನ ಪಾವತಿ ಮಾಡಿದ್ದಲ್ಲಿ ನಿಯಮಾನುಸಾರ ಕಲ್ಲುಗಣಿಗಾರಿಕೆ ನಿರ್ವಹಿಸಲು ಅವಕಾಶ ನೀಡಲಾಗುತ್ತಿದೆ. |
| ಆ) | ಈ ಅಕ್ರಮ ಗಣಿಗಾರಿಕೆ, ಜಲ್ಲಿ ಕ್ವಾರಿ, ಎಂ–ಸ್ಯಾಂಡ್ ನಿರ್ಮಾಣ ಘಟಕಗಳಿಂದಾಗಿ | ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣಾ ಅಧಿನಿಯಮ 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣಾ ನಿಯಮಾವಳಿ 2012ರಂತೆ ಜಿಲ್ಲಾ ಕಲ್ಲುಪುಡಿ ಮಾಡುವ |

| | | |
|---|---|---|
| | ಬೆಂಗಳೂರು ನಗರದ ಸುತ್ತಮುತ್ತಲಿನಲ್ಲಿ ಪರಿಸರದ ಮೇಲೆ ಹಾನಿ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರಕ್ಕೆ ಕ್ರಷರ್ ಘಟಕಗಳನ್ನು ಸ್ಥಾಪಿಸಲು ಪರವಾನಿಗೆ ನೀಡುವ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಅದರಂತೆ ಕಲಂ 6(3)ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿ ಅಧಿಕಾರಿಗಳು ಕ್ರಷರ್ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿತ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ಕಲಂ-6ಮತ್ತು 6-A ರಲ್ಲಿನ ಎಲ್ಲಾ ಷರತ್ತುಗಳು ಪಾಲನೆಯಾದಲ್ಲಿ ವರದಿ ನೀಡಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಅರ್ಜಿತ ಪ್ರದೇಶವನ್ನು ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿ, ಫಾರಂ-ಬಿ1'ರಲ್ಲಿ ಅನುಪಾಲನಾ ಪ್ರಮಾಣ ಪತ್ರ ನೀಡಲಾಗುವುದು. ಅರ್ಜಿದಾರರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಸಿಎಫ್ಇ (consent for establishment) ಹಾಗೂ ಸಿಎಫ್ಒ (consent for operation) ಪಡೆದು ಹಾಜರು ಪಡಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಫಾರಂ-ಸಿ' (ಕ್ರಷರ್ ಲೈಸೆನ್ಸ್) ರಲ್ಲಿ ಕ್ರಷರ್ ಪರವಾನಗಿ ನೀಡಲಾಗುವುದು.<br>ಕಲ್ಲುಗಣಿ ಗುತ್ತಿಗೆಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994ರ ನಿಯಮ 8 (1-A) ರಂತೆ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಪರಿಸರ ಅನುಮತಿ ಪತ್ರ ಪಡೆದು ಮಂಜೂರು ಮಾಡಲಾಗುತ್ತಿದೆ.<br>ಅನಧಿಕೃತ ಗಣಿಗಾರಿಕೆ ಮತ್ತು ಅನಧಿಕೃತ ಕ್ರಷರ್ ಘಟಕಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗಿರುತ್ತದೆ. ವಿವರಗಳನ್ನು ಕಂಡಿಕೆ-(ಉ) ರಲ್ಲಿ ನೀಡಿದೆ. |
| ಇ) | ಗಣಿಗಾರಿಕೆಯಿಂದಾಗಿ ಅರಣ್ಯ ಸಂಪತ್ತು ನಾಶ, ಪ್ರಾಣಿಗಳಿಗೂ ತೊಂದರೆ ಯಾಗುತ್ತಿರುವುದಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಅರಣ್ಯ ಇಲಾಖೆಗಳ ನಡುವಿನ ಸಮನ್ವಯತೆ ಕೊರತೆಯಿಂದಾಗಿ ಗಣಿಗಾರಿಕೆಗೆ ನಿಯಂತ್ರಣ ಹೇರುವುದು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆನೇಕಲ್ ತಾಲ್ಲೂಕು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸೂಕ್ಷ್ಮ ವಲಯದ 10 ಕಿ.ಮೀ ವ್ಯಾಪ್ತಿಯೊಳಗಡೆ ಬರುವ ಕಲ್ಲು ಗಣಿ ಗುತ್ತಿಗೆಗಳನ್ನು ಮತ್ತು ಜೆಲ್ಲಿ ಕ್ರಷರ್‌ಗಳನ್ನು ಸ್ಥಗಿತಗೊಳಿಸಲು ಕೋರಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನರವರು ದಿನಾಂಕ:07.05.2018ರಂದು ಪತ್ರವನ್ನು ಬರೆದಿರುತ್ತಾರೆ.<br>ಈ ಹಿನ್ನೆಲೆಯಲ್ಲಿ ಇಲಾಖೆಯಿಂದ ಸದರಿ ಪ್ರದೇಶದಲ್ಲಿನ ಕಲ್ಲುಗಣಿಗುತ್ತಿಗೆ ಪ್ರದೇಶಗಳನ್ನು ತಪಾಸಣೆ ನಡೆಸಲಾಗಿರುತ್ತದೆ. ಸದರಿ ಸ್ಥಳ ಪರಿಶೀಲನೆಯಂತೆ ಕಲ್ಲುಗಣಿಗುತ್ತಿಗೆದಾರರು ಕಲ್ಲುಗಣಿಗುತ್ತಿಗೆ ಪ್ರದೇಶದಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗನುಸಾರ ಕಾರ್ಯ ನಿರ್ವಹಿಸದಿರುವುದು ಕಂಡುಬಂದಿರುತ್ತದೆ. ಅದರನ್ವಯ ಆನೇಕಲ್ ತಾಲ್ಲೂಕು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಿಂದ 1ಕಿ.ಮೀ. ಸುರಕ್ಷತಾ ವಲಯದಿಂದ ಹೊರಗೆ ಇರುವ 27 ಕಟ್ಟಡ ಕಲ್ಲುಗಣಿ ಗುತ್ತಿಗೆಗಳನ್ನು ಮತ್ತು 24 ಜೆಲ್ಲಿ ಕ್ರಷರ್‌ಗಳನ್ನು ಸ್ಥಗಿತಗೊಳಿಸಲು ಸೂಚಿಸಿ ಈ ಕಛೇರಿಯಿಂದ |

<table>
<tr><td></td><td></td><td>ಎಲ್ಲಾ ಗುತ್ತಿಗೆದಾರರಿಗೆ ಮತ್ತು ಜೆಲ್ಲಿ ಕ್ರಷರ್ ಮಾಲೀಕರಿಗೆ ನೋಟಿಸ್‌ಗಳನ್ನು ಜಾರಿಮಾಡಲಾಗಿರುತ್ತದೆ.<br>ಕಲ್ಲು ಗಣಿ ಗುತ್ತಿಗೆ ಮತ್ತು ಜೆಲ್ಲಿ ಕ್ರಷರ್‌ಗಳನ್ನು ಸ್ಥಗಿತಗೊಳಿಸುವಂತೆ ನೀಡಿರುವ ನೋಟೀಸ್ ವಿರುದ್ಧ ಗುತ್ತಿಗೆದಾರರುಗಳು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 21987/2018, 21985/2018, 19818/2018, 27903/2018, 25912/2018 ಮತ್ತು 25914/2108 ಗಳನ್ನು ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಲಯದ ಅಂತಿಮ ಆದೇಶದ ಅನುಸಾರ ಕಲ್ಲುಗಣಿ ಗುತ್ತಿಗೆಗಳನ್ನು ಮುಂದುವರೆಸುವ ಬಗ್ಗೆ ನಿಯಮಾನುಸಾರ ಕ್ರಮಜರುಗಿಸಲಾಗುವುದು.</td></tr>
<tr><td>ಈ)</td><td>ಬನ್ನೇರಘಟ್ಟ ಅರಣ್ಯ ಪ್ರದೇಶವನ್ನು ರಾಷ್ಟೀಯ ಉದ್ಯಾನ, ವನ್ಯಜೀವಿ ವಲಯ ಎಂದು ಘೋಷಿಸಿದ್ದು, ನಿಯಮಾವಳಿ ಪ್ರಕಾರ ಸುರಕ್ಷಿತ ವಲಯ ಅಥವಾ ಬಫರ್ ಝೋನ್‌ನಲ್ಲಿ ಯಾವುದೇ ಗಣಿಗಾರಿಕೆ ಅಥವಾ ಕ್ರಷರ್‌ಗಳಿಗೆ ಅವಕಾಶವಿಲ್ಲದಿದ್ದರು ಚಾಲನೆಯಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬನ್ನೇರಘಟ್ಟ ರಾಷ್ಟೀಯ ಉದ್ಯಾನವನ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿರ್ಬಂಧಿತ ಪ್ರದೇಶವನ್ನು ಘೋಷಣೆ ಮಾಡುವ ಸಂಬಂಧ ಭಾರತ ಸರ್ಕಾರದ ಪರಿಸರ ಮಂತ್ರಾಲಯದಿಂದ ದಿನಾಂಕ:02-11-2018 ರಂದು ಕರಡು ಅಧಿಸೂಚನೆ ಹೊರಡಿಸಲಾಗಿದೆ. ಸದರಿ ಅಧಿಸೂಚನೆಯು ಇದುವರೆವಿಗೂ ಅಂತಿಮಗೊಂಡಿರುವುದಿಲ್ಲ.<br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:435/2012 Goa Foundations V/s Union of India ದಿನಾಂಕ:21-04-2001ರ ಆದೇಶದಲ್ಲಿ ಪರಿಸರ ಸೂಕ್ಷ್ಮವಲಯಗಳ ಗಡಿಯಿಂದ 01ಕಿಲೋಮೀಟರ್‌ವರೆಗಿನ ಗಣಿಗಾರಿಕೆಯನ್ನು ನಿರ್ಬಂಧಿಸಿರುತ್ತದೆ. ಚಾಲ್ತಿಯಲ್ಲಿರುವ ಯೋಜನೆಗಳ ಸಂಬಂಧ 01 ಕಿ.ಮೀ. ಅಂತರದಲ್ಲಿ ಗಣಿಗಾರಿಕೆಗೆ ಅವಕಾಶವಿರುತ್ತದೆ.<br>ಚಾಲ್ತಿಯಲ್ಲಿರುವ ನಿಯಮಗಳು ಉಲ್ಲಂಘನೆಯಾದ ಪ್ರಕರಣಗಳಲ್ಲಿ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲಾಗುವುದು.</td></tr>
<tr><td>ಉ)</td><td>ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರಗಳನ್ನು ಒದಗಿಸುವುದು)</td><td>ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಸಾಗಣಿಕೆಯನ್ನು ತಡೆಗಟ್ಟಿ ವಿಧಿಸಿರುವ ದಂಡ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತಿರುತ್ತವೆ. .
<table>
<tr><th colspan="4">ಅಕ್ರಮಗಣಿಗಾರಿಕೆ</th></tr>
<tr><th>ಕ್ರ.ಸಂ.</th><th>ವರ್ಷ</th><th>ವಿಧಿಸಿದ ದಂಡ</th><th>ದಾಖಲಿಸಿರುವ ಮೊಕದ್ದಮೆಗಳು</th></tr>
<tr><td>1</td><td>2015-16</td><td>138.96</td><td>43</td></tr>
<tr><td>2</td><td>2016-17</td><td>126.49</td><td>30</td></tr>
<tr><td>3</td><td>2017-18</td><td>168.92</td><td>5</td></tr>
<tr><td>4</td><td>2018-19</td><td>21.25</td><td>PCR-05</td></tr>
<tr><td></td><td>ಒಟ್ಟು</td><td>455.62</td><td>FIR-78 /PCR-05</td></tr>
</table>
</td></tr>
</table>

ಸಂಖ್ಯೆ: ಸಿಐ 440 ಎಂಎಂಎನ್ 2018

**(ರಾಜಶೇಖರ ಬಿ. ಪಾಟೀಲ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ಮುಜರಾಯಿ ಸಚಿವರು.